


ಯಂತ್ರ ಮನುಷ್ಯನ ನಿಯಂತ್ರಿಸುವುದ ನೋಡಿ
ಆಶ್ಚರ್ಯಪಡುತಿರುವ ಲೋಕ
ಬಾಲಕೃಷ್ಣನಿಗೆ ಯಮುನೆ ದಾರಿ ಮಾಡಿಕೊಟ್ಟಂತೆ
ಟ್ರಾಫಿಕ್ ದಯೆ ತೋರಿ ದಾರಿ ಬಿಡುವುದೆಂದು
ಒಂದು ಸಣ್ಣ ಹುಡುಗಿ ಬಾಯಲಿ ಬೆರಳಿಟ್ಟುಕೊಂಡು
ರಿ ಮೇಲೆ ನಿಂತು ವಿಸ್ಮಯ–ಅವಸರಗಳೊಂದಿಗೆ–
ಆದರೆ
ನಿರ್ದಯಿ ಈ ಟ್ರಾಫಿಕ್.

('ಮೋಹನಾ! ಓ ಮೋಹನಾ!' ಸಂಕಲನದಿಂದ)

## ಪಕ್ಕಕ್ಕೆ ಒತ್ತರಿಸಿದರೆ

ಪಕ್ಕಕ್ಕೆ
ಒತ್ತರಿಸಿದರೆ ತಗುಲಿತೊಂದು ವಾಕ್ಯ

ಹಿಂದೆ
ಒಬ್ಬ ರಾಜ
ತನಗೂ ಹೆಂಡತಿಗೂ ನಡುವೆ
ಕತ್ತಿ ನಾಟಿದನಂತೆ ಹಾಸಿಗೆ ಮಧ್ಯದಲ್ಲಿ–
ಯಾರು ಕದಲಿದರೂ
ರಕ್ತ ಮಾತಾಡುತ್ತದೆ
ಹಣ್ಣಾದ ಬೇವಿನಕಾಯಿ ಹೃದಯ
ಸಿಹಿಸಿಹಿಯಾಗಿ ಕಹಿಕಹಿಯಾಗಿ
ಒದ್ದೆಮುದ್ದೆಯಾಗಿ.

ಅಷ್ಟೇ
ಕವಿತೆ ಬರೆಯುವುದೆಂದರೆ
ಖಡ್ಗದೊಂದಿಗೆ ಸಹಜೀವನ ಮಾಡಿದಂತೆ–
ಕೊರಡಾಗದಿರಲೂ ಸಾಧ್ಯವಿಲ್ಲ
ಕೊರಡಾಗಿ ಉಳಿಯಲೂ ಸಾಧ್ಯವಿಲ್ಲ

(ಸರಸ್ವತಿ ಸಮ್ಮಾನ್ ಪ್ರಶಸ್ತಿಗೆ
ಪಾತ್ರವಾಗಿರುವ 'ಪಕ್ಕಕಿ ಒತ್ತಿಗಿಲಿತೆ'
ಸಂಕಲನದ ಶೀರ್ಷಿಕೆ ಪದ್ಯ)